# ನಾಯಕಿಯೂ ಆಗಬೇಕಿತ್ತು ಎಂದೆನಿಸುತ್ತಿದೆ

## ಆಶಾರಾಣಿ
### ಉದಯದ 'ಕಸ್ತೂರಿ ನಿವಾಸ'ದ ಪಾರ್ವತಿ



◆ **ಪಾರ್ವತಿ ಪಾತ್ರ ನಿಮಗೆ ಏಕೆ ಇಷ್ಟ ಆಯ್ತು ಎಂದು ಹೇಳಬಹುದಾ?**

'ಕಸ್ತೂರಿ ನಿವಾಸ' ಹೆಸರಿನಲ್ಲಿಯೇ ಒಂದು ರೀತಿಯ ಆಕರ್ಷಣೆಯ ಕಂಪನದ ಸೆಲೆ ಇದೆ. ಅದು ಅಣ್ಣೋರ ಜನಪ್ರಿಯ ಸಿನಿಮಾ ಒಂದರ ಹೆಸರು ಕೂಡ. ಆ ಕಾರಣಕ್ಕೆ ಹೆಸರು ಕೇಳಿದ ತಕ್ಷಣ ಇಷ್ಟ ಆಯ್ತು. ಆ ಕ್ಷಣ ಪಾತ್ರದ ಬಗ್ಗೆ ಯೋಚನೆಯನ್ನೇ ಮಾಡಿರಲಿಲ್ಲ. ನಿರ್ಮಾಪಕ ಬಾಲಜಿ ಫೋನ್ ಮಾಡಿ ಕೇಳಿದಾಗ ಕಥೆ– ಪಾತ್ರ ವಿಚಾರಿಸದೆ ಒಪ್ಪಿಗೆಯನ್ನು ಸೂಚಿಸಿದೆ. ನಟನೆ ಆರಂಭಿಸಿದ ನಂತರ ಪ್ರಮುಖ ಪಾತ್ರ ಎಂದು ಗೊತ್ತಾಯಿತು. ವೈಯಕ್ತಿಕವಾಗಿ ನನಗೆ ಕೈತುಂಬ ಬಳೆಹಾಕುವುದು, ಹೂವು ಮುಡಿಯುವುದು, ಲಕ್ಷಣವಾಗಿ ಸೀರೆ ಉಟ್ಟುಕೊಳ್ಳುವುದು ಇಷ್ಟ. ಸಂಪ್ರದಾಯವನ್ನೂ ಪಾಲಿಸುವುದು ಖುಷಿಕೊಡುತ್ತದೆ. ನನ್ನ ಪಾಲಿಗೆ ಪಾತ್ರವೂ ಹಾಗೆಯೇ ಇದ್ದಿದ್ದು ಮನಸ್ಸಿಗೆ ಹತ್ತಿರವಾಗಿದೆ. ಇಷ್ಟಪಟ್ಟು ತುಂಬ ಪ್ರೀತಿಯಿಂದ ಮಾಡುತ್ತೇನೆ. ಹಾಗೆಂದು ಬೇರೆ ಪಾತ್ರವನ್ನು ಹಾಗೆ ಮಾಡುವುದಿಲ್ಲ ಎಂದು ಅರ್ಥವಲ್ಲ. ಈ ಪಾತ್ರ ಒಂದಿಷ್ಟು ಆಪ್ತತೆಯನ್ನು ನನ್ನೊಳಗೆ ಗೊತ್ತಿಲ್ಲದಂತೆ ಮೂಡಿಸಿದೆ ಎಂದು ಪಾತ್ರ ಹೇಳುತ್ತೇನೆ.

◆ **ಕಲಾ ಜೀವನದ ನಡುವೆ ಖಾಸಗಿ ಜೀವನವನ್ನು ಹೇಗೆ ಸರಿದೂಗಿಸುತ್ತೀರಿ?**

ನಮ್ಮದು ಮೂಲತಃ ಕಲಾವಿದರ ಕುಟುಂಬ. ನನ್ನ ತಂದೆ– ತಾಯಿ ಗುಬ್ಬಿ ಕಂಪನಿಯ ಕಲಾವಿದರು. ನನ್ನ ಪತಿ– ಮಕ್ಕಳು ಕೂಡ ಕಲಾವಿದರು. ಹಾಗಾಗಿ ನನಗೆ ತೊಂದರೆ ಯಾವತ್ತೂ ಆಗಿಲ್ಲ. ನಮ್ಮ ಮನೆಯವರೆಲ್ಲ ಸಹಕರಿಸುವುದರಿಂದ ಸಿನಿಮಾ, ಕಿರುತೆರೆ, ರಂಗಭೂಮಿ ಮತ್ತು ನನ್ನ ಖಾಸಗಿ ಬದುಕು ಸರಿದೂಗಿಸುತ್ತಿದ್ದೇನೆ.

ನನ್ನ ಅಮ್ಮ ಜಯಲಕ್ಷ್ಮಿ– ತಂದೆ ಕೃಷ್ಣಮೂರ್ತಿ ಗುಬ್ಬಿಕಂಪನಿಯಲ್ಲಿ ಪಾತ್ರ ಮಾಡುತ್ತಿದ್ದರು. ಕಂಪನಿಯಲ್ಲಿ ಅಪ್ಪ ಸ್ಕ್ರೀನ್ ಪೇಂಟಿಂಗ್ ಸೇರಿದಂತೆ ಸ್ತ್ರೀಪಾತ್ರಗಳನ್ನೂ ನಿರ್ವಹಿಸುತ್ತಿದ್ದರು. ನಾನು ಹುಟ್ಟಿದ್ದು ಕೂಡ ಕಂಪನಿಯಲ್ಲಿ. ನನಗೆ ಹುಟ್ಟಿನೊಂದಿಗೆ ಬಣ್ಣದ ಜೀವನ ಅಂಟಿಕೊಂಡು ಬಂದಿದೆ. ನನ್ನ ಐದನೇ ವರ್ಷದಲ್ಲಿ 'ಮೃತ್ಯುಂಜಯ' ನಾಟಕದಲ್ಲಿ ಬಾಲಕೃಷ್ಣನಾಗಿ ನಟಿಸಿದ್ದೆ. ಅಲ್ಲಿಂದ ಅದರ ಆಕರ್ಷಣೆ ನನ್ನನ್ನು ಸೆಳೆದುಕೊಂಡಿದೆ.

◆ **ರಂಗಭೂಮಿಯಿಂದ ತೆರೆಯತ್ತ ಪಾತ್ರ ಪಲ್ಲಟದ ಬಗ್ಗೆ ಹೇಳಿ...**

ಬಾಲ್ಯದಲ್ಲಿ ರಂಗ ಪ್ರವೇಶ ಮಾಡಿದ ನನಗೆ ಬಣ್ಣ ಬದುಕಾಗಿ ಮುಂದುವರಿಸಲು ಕಾರಣವಾಯಿತು. ನಟನೆಯ ತಾಯಿಬೇರು ರಂಗಭೂಮಿ ಎಂದು ನನಗೆ ಅನಿಸುತ್ತದೆ. ದೊಡ್ಡ ನಟರೆಲ್ಲ ಬಹುತೇಕ ರಂಗಭೂಮಿಯ ನಂಟನ್ನು ಇಟ್ಟುಕೊಂಡವರೇ ಆಗಿದ್ದಾರೆ. ನಾನೂ ಅಲ್ಲೇ ಬೆಳೆದೆ ಅನ್ನುವುದಕ್ಕಿಂತ ಅದನ್ನು ಹೆಚ್ಚು ಪ್ರೀತಿಸತೊಡಗಿದ್ದೆ. ಆಗಲೇ ಕಿರುತೆರೆಗೆ ಅವಕಾಶ ಬಂದಿತ್ತು. ಟೀವಿಯ ಬಣ್ಣ ಕ್ಷಣಿಕ, ಒಂದು ಪಾತ್ರದ ನಂತರ ಕಷ್ಟ ಆಗಬಹುದು ಎನ್ನುವ ಅನುಮಾನ ಕಾಡಿತ್ತು. ಕಿರುತೆರೆಯ ಸಣ್ಣ ಸಣ್ಣ ಡೈಲಾಗ್ ನಂತರ ತುಂಬ ಸಮಯ ಕಾಯಬೇಕು ಎನ್ನುವ ತಪ್ಪು ಅಭಿಪ್ರಾಯವೂ ಇತ್ತು. 'ಎಚ್ಚಮನಾಯಕ' ನಾಟಕವನ್ನು ಬೆಂಗಳೂರಿನ ಆರ್‌ಟಿ ನಗರದಲ್ಲಿ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಆಡಿದ್ದೆವು. ಆ ಕಾರ್ಯಕ್ರಮಕ್ಕೆ ಕರಿಸುಬ್ಬು ಅತಿಥಿಯಾಗಿ ಬಂದಿದ್ದರು. ನನ್ನ ಅಭಿನಯ ನೋಡಿ 'ಲೆಪ್ರಸಿ' ಎನ್ನುವ ಸಾಕ್ಷ್ಯಚಿತ್ರಕ್ಕೆ ಆಹ್ವಾನ ನೀಡಿದರು. ಅದೇ ಮೊದಲ ಬಾರಿಗೆ ನಾನು ಕ್ಯಾಮೆರಾವನ್ನು ಎದುರಿಸಿದೆ. ಅದರಲ್ಲಿ ನಾಯಕಿಯ ತಂಗಿ ಪಾತ್ರವನ್ನು ಮಾಡಿದ್ದೆ. ಮದುವೆಯ ನಂತರ ಧಾರಾವಾಹಿಗಳಲ್ಲಿಯೂ ಸಣ್ಣಪುಟ್ಟ ಪಾತ್ರಗಳನ್ನು ಮಾಡ್ತಾ ಇದ್ದೆ. ಬಿಟ್ಟರೆ ದೂರದರ್ಶನದ ನಾಟಕಗಳನ್ನು ಮಾತ್ರ ಮಾಡ್ತಿದ್ದೆ. ಕಿರುತೆರೆಯಲ್ಲಿ ಪೂರ್ಣವಾಗಿ ತೊಡಗಿಸಿಕೊಂಡ ನಂತರ ಅಲ್ಲಿಯ ನೈಜತೆ ಅರ್ಥವಾಯಿತು. ರಂಗದಲ್ಲಿ ಆಂಗಿಕ ಅಭಿನಯ ಮತ್ತು ಧ್ವನಿ ಕೊನೆಯ ಪ್ರೇಕ್ಷಕನಿಗೂ ತಲುಪಿಸಬೇಕು. ಕಿರುತೆರೆಯಲ್ಲಿ ಮುಖದ ಅಭಿನಯದಲ್ಲಿಯೇ ಎಲ್ಲವನ್ನೂ ಸಂವಹನ ಮಾಡಬೇಕು. 'ಅಮ್ಮನಾಗಮ್ಮ'ದಲ್ಲಿ ಪ್ರಮುಖ ಪಾತ್ರ ಅದೂ ನೆಗೆಟಿವ್, ರೀಪ್ಲೇಸ್‌ಗೆ ಮಾಡಿದೆ. ಅದು ಒಳ್ಳೆಯ ಹೆಸರು ತಂದುಕೊಡ್ತು. ನಂತರ 'ರಂಗೋಲಿ' ಕಿರುತೆರೆಯಲ್ಲಿ ಮಹತ್ವದ ಬದಲಾವಣೆಯನ್ನು ನನ್ನ ಜೀವನದಲ್ಲಿ ತಂದಿದೆ.

◆ **ನಿರಂತರ ಕಾಡುವ– ಇಂತಹ ಒಂದು ಪಾತ್ರ ಮಾಡಬೇಕು ಎಂದು ಅನ್ನಿಸಿದ್ದು ಇದೆಯಾ?**

ಕಾಡುವ ಪಾತ್ರ ಅಂದರೆ, ಎಲ್ಲ ಸವಾಲಿನ ಪಾತ್ರ ಕಾಡುತ್ತವೆ. ತಾಯಿಗೆ ಹತ್ತು ಮಕ್ಕಳು ಇದ್ದರೆ, ಅವರಲ್ಲಿ ಯಾವ ಮಗು ಇಷ್ಟ ಎಂದು ಹೇಳಲು ಆಗುತ್ತದೆಯೇ? ಕಲಾವಿದರು ಅಂದ ಮೇಲೆ ಯಾವುದೇ ಪಾತ್ರವನ್ನು ನಿರ್ವಹಿಸುವ ಶ್ರದ್ಧೆ ಮತ್ತು ಆಸಕ್ತಿಯನ್ನು ಮೈಗೂಡಿಸಿಕೊಂಡಿರಬೇಕು. ಎಲ್ಲ ಪಾತ್ರವನ್ನೂ ನಿರ್ವಹಿಸುತ್ತೇನೆ. ಅದರಲ್ಲಿ ಚಿಕ್ಕದು ದೊಡ್ಡದು ಎಂದೇನೂ ಇಲ್ಲ. ನಾಟಕಗಳಲ್ಲಿ ಪೌರಾಣಿಕ, ಸಾಮಾಜಿಕ, ಐತಿಹಾಸಿಕ, ಜಾನಪದ ನೆಲೆಯ ಪ್ರದರ್ಶನಗಳನ್ನು ನೀಡಿದ್ದೇನೆ. ರಾಜನ ಪಾತ್ರವನ್ನೇ ಮಾಡಿದ್ದೇನೆ. ಕಿರುತೆರೆಯಲ್ಲಿ ಸಾಮಾನ್ಯವಾಗಿ ನೆಗೆಟಿವ್ ಪಾತ್ರಗಳನ್ನು ಹೆಚ್ಚು ಮಾಡಿದ್ದೇನೆ. ಪಾರ್ವತಿ ಪಾತ್ರ ನನ್ನ ಮೇಲಿದ್ದ ಕಲ್ಪನೆಯನ್ನೇ ಬದಲಿಸಿದೆ. ಇದು ಅನೇಕರಿಗೆ ಇಷ್ಟ ಕೂಡ ಆಗಿದೆ. ಈವರೆಗೆ 60– 70 ಧಾರಾವಾಹಿಗಳು, 25ರಿಂದ 30 ಸಿನಿಮಾಗಳಲ್ಲಿ ಮಾಡಿದ್ದೇನೆ. ಸಿನಿಮಾದಲ್ಲಿ ನಾಯಕಿಯಾಗಿ ಅವಕಾಶ ಬಂದಾಗ ಇಷ್ಟ ಆಗಿರಲಿಲ್ಲ. ಈಗ ಅಲ್ಲಿಯೂ ನಾಯಕಿಯಾಗಿ ಮಾಡಬೇಕಿತ್ತು ಎಂದು ಅನಿಸುತ್ತಿದೆ.

■ **ರಾಘವೇಂದ್ರ ಕೆ.**